## <u>ಎರಡನೇ ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ</u>

ದಿನಾಂಕ 22 ನೇ ಸಪ್ಟೆಂಬರ್ ಮಾಹೆ 2021 ನೇ ಇಸವಿ.

<u>ಸಿ.ಸಿ. ನಂಃ 573/2020</u>

ರಾಜ್ಯ ಸರ್ಕಾರದ ಪರವಾಗಿ

ಪೋಲಿಸ್ ಉಪನಿರೀಕ್ಷಕರು, ,
ಹೆಬ್ರಿ ಪೋಲಿಸ್ ಠಾಣೆ,
ಹೆಬ್ರಿ, ಉಡುಪಿ ಜಿಲ್ಲೆ. ... ಫಿರ್ಯಾದುದಾರರು

- ವಿರುದ್ಧ -

ರಾಜು ಬೈಲಕೂರ್ ಮತ್ತು ಇತರರು ... ಆರೋಪಿತರು

1. ರಾಜು ಬೈಲಕೂರು
ಪ್ರಾಯಃ 26 ವರ್ಷಗಳು,
ತಂದೆಃ ಸಾಬಣ್ಣ
ವಾಸಃ ಆಲೂರು ಅಂಚೆ,
ಬೈಲಕೂರು ಅಂಚೆ, ಮುದ್ದೆಬಿಹಾಳ್ ತಾಲೂಕು,
ಬಿಜಾಪುರ ಜಿಲ್ಲೆ

2. ಶ್ರೀನಿವಾಸ ಹೆಬ್ಬಾರ್
ಪ್ರಾಯ ಃ 43 ವರ್ಷ
ತಂದೆ ಃ ದಿ. ವಿಶ್ವನಾಥ್ ಹೆಬ್ಬಾರ್
ವಾಸ ಃ ಶಂಕರಲಿಂಗೇಶ್ವರ ದೇವಸ್ಥಾನದ ಬಳಿ,
ದೇವಸ್ಥಾನ ಬೆಟ್ಟು, ಶಿವಪುರ ಗ್ರಾಮ,
ಹೆಬ್ರಿ ತಾಲೂಕು.

3. ಕರ್ಣಾ ಕೆ. ಎಸ್
ಪ್ರಾಯ ಃ 31 ವರ್ಷ
ತಂದೆ ಃ ಸಿದ್ದಪ್ಪ ಕೆ
ವಾಸ ಃ ಸೋಮಲಾಪುರ,
ಚೆನ್ನಗಿರಿ ತಾಲೂಕು, ದಾವಣಗೆರೆ ಜಿಲ್ಲೆ ... ಆರೋಪಿತರು

## <u>ಆಪಾದನೆ</u>

1 ರಿಂದ 3 ನೇ ಆರೋಪಿತರಾದ ನೀವು ದಿನಾಂಕ 30.07.2019 ರಂದು ಸಂಜೆಯ ಸಮಯ ಕಬ್ಬಿನಾಲೆ ಗ್ರಾಮದ ಕುಚ್ಚೂರುವಿನ ಹಿಂದು ಎಂಬಲ್ಲಿ ಶೇಖರ

ಗೌಡ ರವರ ಮನೆಯ ಬಳಿ ಸರ್ವೆನಂಬ್ರ 71/8 ರ ಜಾಗದಲ್ಲಿ ಗಾಳಿ ಮಳೆಗೆ ತುಂಡಾದ ಎಲೆಕ್ಟ್ರಿಕ್ ಕಂಬವನ್ನು ಸರಿಪಡಿಸುವಂತೆ ದಿನಾಂಕ 31.07.2019 ರಂದು 2 ನೇ ಅರೋಪಿಯು ಸಾಕ್ಷಿ-1 ಮತ್ತು ಇತರರಿಗೆ ತಿಳಿಸಿದ ಮೇರೆಗೆ ಸದ್ರಿ ಎಲೆಕ್ಟ್ರಿಕ್ ಕಂಬಗಳನ್ನು ಸರಿಪಡಿಸಲು ಹೋಗುತ್ತಿರುವಾಗ 1 ನೇ ಆರೋಪಿಯು ಅಲ್ಲಿಯ ವಿದ್ಯುತ್ ಲೈನ್ ಅಫ್ ಮಾಡಿರುವುದಾಗಿ ಮತ್ತು ಲೈನ್ ಕೆಲಸ ಶುರಮಾಡಬಹುದು ಎಂದು ತಿಳಿಸಿದ ಮೇರೆಗೆ ಸಾಕ್ಷಿ-1 ಮತ್ತು ಇತರರು ಸದ್ರಿ ಸ್ಥಳಕ್ಕೆ ಹೋಗಿ ವಾಲಿಕೊಂಡು ನಿಂತಿರುವ ಸಿಮೆಂಟ್ ವಿದ್ಯುತ್ ಕಂಬವನ್ನು ನೆಲಕ್ಕೆ ಬೀಳಿಸುವ ಉದ್ದೇಶದಿಂದ ಸುಮಾರು ಮಧ್ಯಾಹ್ನ 1.30 ಗಂಟೆಗೆ ನೇತಾಡುತ್ತಿದ್ದ ಎಲ್ ಟಿ ವಿದ್ಯುತ್ ವಯರ್ ನ್ನು ಕೈಯಿಂದ ಹಿಡಿದು ಎಳೆದಾಗ ವಿದ್ಯುತ್ ಕಂಬದಿಂದ ತಪ್ಪಿ ಬೆಂಡಾಗಿರುವ ಅಡಿಕೆ ಮರದ ಮೇಲೆ ಬಿದ್ದು ಎಲ್ ಟಿ ವಯರ್ ಅಡಿಕೆ ಮರ ಸಮೇತ 80 ಮೀಟರ್ ದೂರದಲ್ಲಿ ತಿಂಗಳೆ-ಹೆಬ್ರಿ ರಸ್ತೆಯ ಮೇಲ್ಗಡೆಯಿಂದ ಹಾದು ಹೋಗಿರುವ ಹೆಚ್-ಟಿ ವಯರ್ ಗೆ ಎಲ್ ಟಿ ವಯರ್ ತಾಗಿದ ಪರಿಣಾಮ ಒಮ್ಮೆಲೆ ಎಲ್ ಟಿ ವಯರ್ ನಲ್ಲಿ ವಿದ್ಯುತ್ ಹರಿದು ಶಾಕ್ ಹೊಡೆದು ಪುರಷೋತ್ತಮ ಮತ್ತು ಹೇಮಂತ್ ಅಲಿಯಾಸ್ ಹರ್ಷನ್ ಇವರಿಗೆ ಸಾದಾ ಸ್ವರೂಪದ ಗಾಯವಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 337 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ, ಆರೋಪಿತರಾದ ನೀವು ಈ ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಮೇಲೆ ಹೇಳಿದ ಕೃತ್ಯವೆಸಗಿದ ಪರಿಣಾಮ ಎಲ್ ಟಿ ವಯರ್ ನಲ್ಲಿ ವಿದ್ಯುತ್ ಹರಿದು ಶಾಕ್ ಹೊಡೆದು ಗುರುರಾಜ್ ರವರು ಮೃತಪಟ್ಟಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೂರನೇಯದಾಗಿ, ಆರೋಪಿತರಾದ ನೀವು ಈ ಮೇಲೆ ಹೇಳಿದಂತೆ ಕೃತ್ಯವೆಸಗಿದ್ದಲ್ಲದೆ ಕೆಲಸಗಾರರ ಸುರಕ್ಷತೆಯ ಬಗ್ಗೆ ಯಾವುದೇ ಮುಂಜಾಗ್ರತಾ

ಕ್ರಮವನ್ನು ತೆಗೆದುಕೊಳ್ಳದೆ ಕೆಲಸಗಾರರ ಮೇಲೆ ತೀರಾ ನಿರ್ಲಕ್ಷತನ ತೋರಿದ್ದು, ಆ ಮೂಲಕ ನಿಯಮ 19(1), 19(2) ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಹಾಗೂ ವಿದ್ಯುಚ್ಛಕ್ತಿ ಪೂರೈಗೆ ಸಂಬಂಧಪಟ್ಟಕ್ರಮಗಳು) ನಿಯಾಮವಳಿಗಳು 2010 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

**1 ರಿಂದ 3 ಆರೋಪಿತರು:**

ಪ್ರಶ್ನೆ 1: ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?

ಉತ್ತರಃ

ಪ್ರಶ್ನೆ 2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ಪ್ರತಿರಕ್ಷೆ ಸಾಕ್ಷಿ ಮಾಡಲು ಬಯಸುತ್ತೀರೋ?

ಉತ್ತರಃ

(1 ರಿಂದ 3ನೇ ಆರೋಪಿತರಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ. )

ಎ.ಹೆ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.,
ಕಾರ್ಕಳ. ಸಿ/ಸಿ.